# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ: 154, ಬಸವನಗುಡಿ ಬೆಂಗಳೂರು.

ಸಂಖ್ಯೆ: ಸ.ಅ/ವಾ-154/2022-23

ದಿನಾಂಕ: 05-12-2022

## ವಾರ್ಡ್ ಸಮಿತಿ ಸಭೆಯ ನಡವಳಿಗಳು

************

ವಿಷಯ: ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)/ಪಿಆರ್/35/2020-21, ದಿನಾಂಕ: 21-09-2020ರ ಆದೇಶದಂತೆ ದಿನಾಂಕ: 03-12-2022 ಶನಿವಾರ ವಾರ್ಡ್ ಸಂಖ್ಯೆ: 210, ಬಸವನಗುಡಿ ವಾರ್ಡ್ ಕಛೇರಿಯಲ್ಲಿ ನಡೆದ ನವೆಂಬರ್ ತಿಂಗಳ 1ನೇ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಸ್ಥಳ: ಬಿಬಿಎಂಪಿ ವಾರ್ಡ್ ಕಛೇರಿ, ಬಸವನಗುಡಿ, ಎನ್.ಆರ್. ಕಾಲೋನಿ ಹತ್ತಿರ
ಸಮಯ: ಬೆಳಿಗ್ಗೆ 11.00 ಗಂಟೆಗೆ

**ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳ ವಿವರ**

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ಮಂಜುನಾಥ ರೆಡ್ಡಿ | ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು |
| 2 | ಶ್ರೀ ಟಿ. ಕೃಷ್ಣಮೂರ್ತಿ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್-210, ಬಸವನಗುಡಿ |
| 3 | ಶ್ರೀ. ಬಾಲಕೃಷ್ಣ. ಎಂ | ಕಿ.ಆ.ಪರಿವೀಕ್ಷಕರು ವಾರ್ಡ್-210 |
| 4 | ಶ್ರೀ. ಎಂ. ಕೃಷ್ಣಮೂರ್ತಿ | ಬೆಸ್ಕಾ ಪರಿವೀಕ್ಷಕರು |
| 5 | ಶ್ರೀಮತಿ. ಶ್ರೀಲತಾ | ಗುತ್ತಿಗೆದಾರರು, ಬೀದಿದೀಪ ನಿರ್ವಹಣೆ |
| 6 | ಶ್ರೀಮತಿ. ಸತ್ಯಲಕ್ಷ್ಮೀರಾವ್ | ಸಾರ್ವಜನಿಕರು |
| 7 | ಶ್ರೀಮತಿ. ಜಯಾ ಎಸ್. ರಾವ್ | ಸಾರ್ವಜನಿಕರು |
| 8 | ಶ್ರೀ. ಅಶೋಕ | ಸಾರ್ವಜನಿಕರು |
| 9 | ಶ್ರೀ. ನಾಗರಾಜ | ಸಾರ್ವಜನಿಕರು |
| 10 | ಶ್ರೀ. ಕಾರ್ತಿಕ್ | ಸಾರ್ವಜನಿಕರು |
| 11 | ಶ್ರೀ. ನಿತಿನ್ ಅರಸ್ | ಸಾರ್ವಜನಿಕರು |
| 12 | ಶ್ರೀ. ಬಿ.ಆರ್. ನಾಗಪ್ರಸಾದ್ | ಸಾರ್ವಜನಿಕರು |
| 13 | ಶ್ರೀ. ಹೆಚ್. ಪ್ರಕಾಶ್ ಹತಾವರ್ | ಸಾರ್ವಜನಿಕರು |
| 14 | ಶ್ರೀ. ಸತ್ಯೇಂದ್ರ ವಿಠ್ಠಲ್ | ಸಾರ್ವಜನಿಕರು |
| 15 | ಶ್ರೀ. ರಾಜೀವ್ ವೇಣುಗೋಪಾಲ್ | ಸಾರ್ವಜನಿಕರು |
| 16 | ಶ್ರೀ. ಆನಂದ ತೀರ್ಥ | ಸಾರ್ವಜನಿಕರು |

ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳಾದ ಶ್ರೀ. ಮಂಜುನಾಥ ರೆಡ್ಡಿ ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ಮತ್ತು ಸದಸ್ಯರಿಗೆ ಸ್ವಾಗತ ಕೋರುವುದರೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

ಬೈಟು ಕಾಫಿ ಹೋಟೆಲ್, ಪೋಲೀಸ್ ಠಾಣಾ ರಸ್ತೆಗಳಲ್ಲಿ ಬಿದ್ದಿರುವ ಮರಗಳ ಅವಶೇಷಗಳನ್ನು ತೆಗೆಯಲು ಸಭೆಯಲ್ಲಿ ಸಾರ್ವಜನಿಕರು ಕೋರಿರುತ್ತಾರೆ. ಈ ಬಗ್ಗೆ ಕ್ರಮಕೈಗೊಳ್ಳಲಾಗುವುದು ಎಂದು ಸಭೆಯಲ್ಲಿ ಹಾಜರಿದ್ದ ಅಭಿಯಂತರರು ತಿಳಿಸಿರುತ್ತಾರೆ.



Scanned with CamScanner

ವಾರ್ಡ್ ವ್ಯಾಪ್ತಿಯಲ್ಲಿ ವಾಹನಗಳನ್ನು ಅವ್ಯಾಹತವಾಗಿ ನಿಲ್ಲಿಸುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ ಹಾಗೂ ಬೈಟು ಕಾಫಿ ಹೋಟೆಲ್ ಮುಂಭಾಗ ರಸ್ತೆಯ ಮೂಲೆಗಳಲ್ಲಿ ವಾಹನಗಳನ್ನು ನಿಲುಗಡೆ ಮಾಡುವುದನ್ನು ತಡೆಗಟ್ಟಲು ಸಾರ್ವಜನಿಕರು ಕೇಳಿರುತ್ತಾರೆ.

ಈ ಬಗ್ಗೆ ಕ್ರಮವಹಿಸಲು ಸಂಚಾರ ನಿಯಂತ್ರಣ ಪೋಲೀಸ್ ರವರಿಗೆ ವಿಷಯ ತಿಳಿಸಿ ಕ್ರಮಕೈಗೊಳ್ಳುವುದಾಗಿ ನೋಡಲ್ ಅಧಿಕಾರಿಗಳು ಸಭೆಯಲ್ಲಿ ತಿಳಿಸಿರುತ್ತಾರೆ.

ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ, ಬೀದಿ ಬದಿಗಳಲ್ಲಿ ತಳ್ಳುವ ಗಾಡಿಗಳನ್ನು ಇಟ್ಟುಕೊಂಡು ಪಾದಚಾರಿ ಮಾರ್ಗಗಳನ್ನು ಅತಿಕ್ರಮಿಸಿಕೊಂಡು ವ್ಯಾಪಾರ ಮಾಡುತ್ತಿರುವುದರಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತಿರುವ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಹಾಗೂ ಅನಧಿಕೃತ ಅಂಗಡಿ, ತಳ್ಳುವ ಗಾಡಿಗಳನ್ನು ತೆರವುಗೊಳಿಸಲು ಸಭೆಯಲ್ಲಿ ಸಾರ್ವಜನಿಕರು ಕೋರಿರುತ್ತಾರೆ.

ಈ ಬಗ್ಗೆ ಪೋಲೀಸ್ ಇಲಾಖೆ, ಆರೋಗ್ಯ ವಿಭಾಗ ಹಾಗೂ ಇಂಜಿನಿಯರಿಂಗ್ ವಿಭಾಗದವರು ಒಟ್ಟುಗೂಡಿ ಕಾರ್ಯಾಚರಣೆ ನಡೆಸಲು ನೋಡಲ್ ಅಧಿಕಾರಿಗಳು ಸೂಚಿಸಿರುತ್ತಾರೆ.

ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳ ನಿರ್ವಹಣೆಯನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸಲು ಕ್ರಮಕೈಗೊಳ್ಳುವಂತೆ ಸಾರ್ವಜನಿಕರು ಸಭೆಯಲ್ಲಿ ಕೋರಿರುತ್ತಾರೆ. ಈ ಬಗ್ಗೆ ಸೂಕ್ತ ಕ್ರಮಕೈಗೊಂಡು ಬೀದಿ ದೀಪಗಳ ಸಮರ್ಪಕ ನಿರ್ವಹಣೆ ಮಾಡುವುದಾಗಿ ಗುತ್ತಿಗೆದಾರರು ಸಭೆಯಲ್ಲಿ ತಿಳಿಸಿರುತ್ತಾರೆ.

ವಾರ್ಡ್ ವ್ಯಾಪ್ತಿಯಲ್ಲಿನ ತ್ಯಾಗರಾಜನಗರ ಕೋ-ಆಪರೇಟಿವ್ ಬ್ಯಾಂಕ್ ರವರು ಜನರೇಟರ್ ಉಪಯೋಗಿಸುವುದರಿಂದ ಅದರಿಂದಾಗುವ ಹೆಚ್ಚು ಶಬ್ದದಿಂದ ಸುತ್ತಮುತ್ತಲಿನ ನಿವಾಸಿಗಳಿಗೆ ತೊಂದರೆಯಾಗುತ್ತಿದ್ದು ಈ ಬಗ್ಗೆ ಕ್ರಮಕೈಗೊಳ್ಳುವಂತೆ ಸಾರ್ವಜನಿಕರು ಕೋರಿರುತ್ತಾರೆ.

ಈ ಬಗ್ಗೆ ಮಾಲಿನ್ಯ ನಿಯಂತ್ರಣ ಮಂಡಳಿ ರವರಿಗೆ ದೂರು ನೀಡಲು ಸದರಿಯವರಿಗೆ ನೋಡಲ್ ಅಧಿಕಾರಿಗಳು ತಿಳಿಸಿರುತ್ತಾರೆ.

ಸುಬ್ಬರಾಮಚೆಟ್ಟಿ ಮುಖ್ಯ ರಸ್ತೆಯಲ್ಲಿನ ಬ್ಲಾಂಪ್‌ಕಿಟ್ ಸಂಸ್ಥೆಯವರು ರಸ್ತೆ ಅತಿಕ್ರಮಣ ಮಾಡಿ ಸುತ್ತಮುತ್ತಲು ಕಸವನ್ನು ಹಾಕುತ್ತಿದ್ದು ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ತ್ಯಾಜ್ಯ ನಿರ್ವಹಣೆಯನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸಲು ಸಭೆಯಲ್ಲಿ ಸಾರ್ವಜನಿಕರು ಕೋರಿರುತ್ತಾರೆ. ಈ ಬಗ್ಗೆ ಕ್ರಮಕೈಗೊಳ್ಳಲಾಗುವುದೆಂದು ಸಭೆಯಲ್ಲಿ ಹಾಜರಿದ್ದ ಶ್ರೀ. ಬಾಲಕೃಷ್ಣ ಕಿರಿಯ ಆರೋಗ್ಯ ಪರಿವೀಕ್ಷಕರು ಸಭೆಗೆ ತಿಳಿಸಿರುತ್ತಾರೆ.

ಸುಬ್ಬರಾಮಚೆಟ್ಟಿ ರಸ್ತೆ, ಪೂರ್ವ ಆಂಜನೇಯ ರಸ್ತೆಯ ಬದಿಗಳಲ್ಲಿ ಚರಂಡಿಯ ಮೇಲಿನ ಕಲ್ಲುಹಾಸುಗಳು ಸರಿಯಾಗಿ ಇಲ್ಲದಿರುವ ಬಗ್ಗೆ ಕ್ರಮಕೈಗೊಳ್ಳಲು ಕೋರಿರುತ್ತಾರೆ. ಈ ಬಗ್ಗೆ ವಾರ್ಡ್‌ನ ಅನುದಾನದಲ್ಲಿ ಕಾರ್ಯಕ್ರಮವನ್ನು ಅಳವಡಿಸಿಕೊಂಡಿದ್ದು ಕೂಡಲೇ ಸದರಿ ಕಾಮಗಾರಿಯನ್ನು ನಿರ್ವಹಿಸುವುದಾಗಿ ಅಭಿಯಂತರರು ಸಭೆಗೆ ತಿಳಿಸಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಅಶಾ ಕಿರಣ್ ಅಪಾರ್ಟ್‌ಮೆಂಟ್‌ನ ನಿವಾಸಿಗಳು ಅಪಾರ್ಟ್‌ಮೆಂಡ್ ಮುಂಭಾಗ ಚರಂಡಿಯ ನೀರು ನಿಲ್ಲುತ್ತಿದ್ದು ಇದರಿಂದ ಸೊಳ್ಳೆಗಳ ಉತ್ಪತ್ತಿ ಹೆಚ್ಚಾಗಿರುತ್ತದೆ, ಚರಂಡಿಯಲ್ಲಿ ನೀರು ಸರಾಗವಾಗಿ ಹರಿಯುತ್ತಿಲ್ಲ ಹಾಗೂ ಬೆಸ್ಕಾ ಇಲಾಖೆಯವರು ಅಳವಡಿಸಿರುವ ಟ್ರಾನ್ಸ್‌ಫಾರ್ಮರ್ ಹಾಗೂ ವಿದ್ಯುತ್ ಕೇಬಲ್ ಕೂಡ ನೀರಿನಲ್ಲಿ ಇದ್ದು ತೊಂದರೆಯಾಗುತ್ತಿರುವ ಬಗ್ಗೆ ಸಭೆಗೆ ತಿಳಿಸಿರುತ್ತಾರೆ.

(2)

Scanned with CamScanner

ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಅಭಿಯಂತರರು ಈ ಬಗ್ಗೆ ಕೂಡಲೇ ಪರಿಶೀಲಿಸಿ, ಸೂಕ್ತ ಕ್ರಮಕೈಗೊಳ್ಳುವುದಾಗಿ ತಿಳಿಸಿರುತ್ತಾರೆ ಮತ್ತು ಸ್ಥಳ ಪರಿಶೀಲನೆ ಮಾಡಿ ಸದರಿ ರಸ್ತೆ ಮತ್ತು ಚರಂಡಿಯು ರಸ್ತೆ ಮತ್ತು ಮೂಲಭೂತ ಸೌಕರ್ಯ ಇಲಾಖೆ, ಬಿ.ಬಿ.ಎಂ.ಪಿ ರವರ ವ್ಯಾಪ್ತಿಗೆ ಬರುತ್ತಿದ್ದು, ಆದಾಗ್ಯೂ ಸಹ ವಾರ್ಡ್ ವತಿಯಿಂದ ನಿಂತ ಚರಂಡಿ ನೀರನ್ನು ತೆಗೆಯಲು ಕ್ರಮಕೈಗೊಳ್ಳಲಾಗಿರುತ್ತದೆ ಮತ್ತು ಸದರಿ ಜಾಗದಲ್ಲಿ ಬಿದ್ದಿದ್ದ ಕೇಬಲ್, ತ್ಯಾಜ್ಯವನ್ನು ಸಹ ತೆಗೆಯಲಾಗಿರುತ್ತದೆ. ಸದರಿ ಚರಂಡಿಯಲ್ಲಿನ ನೀರು ಸರಾಗವಾಗಿ ಹರಿಯಲು ಹಾಗೂ ಅಪಾರ್ಟ್‌ಮೆಂಟ್‌ನ ಮುಂಭಾಗ ಸ್ವಚ್ಛತೆ ಕಾಪಾಡಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯ ಇಲಾಖೆ, ಬಿ.ಬಿ.ಎಂ.ಪಿ ರವರಿಗೆ ಮೌಖಿಕವಾಗಿ ತಿಳಿಸಲಾಗಿರುತ್ತದೆ.

ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ ಅಧ್ಯಕ್ಷರು ರವರು ಈ ವಿಷಯಗಳ ಬಗ್ಗೆ ಮುಂದಿನ ಕ್ರಮಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ, ವಂದನೆಗಳೊಂದಿಗೆ ಈ ಸಭೆಯನ್ನು ಅಧ್ಯಕ್ಷರು ಮುಕ್ತಾಯಗೊಳಿಸಿದರು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ: 210, ಬಸವನಗುಡಿ

05/12

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 210, ಬಸವನಗುಡಿ



Scanned with CamScanner